# Visit of Smt. Meenakashi Lekhi, MoS (External Affairs & Culture) to Panama, Honduras, Chile (April 28 - May 05, 2022)

May 08, 2022

---

### ಶ್ರೀಮತಿ ಮೀನಕಾಶಿ ಲೇಖಿ, ರಾಜ್ಯ ಸಚಿವೆ (ವಿದೇಶಾಂಗ ವ್ಯವಹಾರಗಳು ಮತ್ತು ಸಂಸ್ಕೃತಿ) ಪನಾಮ, ಹೊಂಡುರಾಸ್, ಚಿಲಿಗೆ ಅಧಿಕೃತ ಭೇಟಿ (ಏಪ್ರಿಲ್ 28 - ಮೇ 05, 2022)

ಮೇ 08, 2022

ಭಾರತದ ವಿದೇಶಾಂಗ ವ್ಯವಹಾರಗಳು ಮತ್ತು ಸಂಸ್ಕೃತಿಯ ರಾಜ್ಯ ಸಚಿವೆ ಶ್ರೀಮತಿ ಮೀನಾಕಾಶಿ ಲೇಖಿ, ಎಮ್ಒಎಸ್ (ಎಮ್ಎಲ್) ಅವರು 28 ಏಪ್ರಿಲ್ - 05 ಮೇ 2022 ರವರೆಗೆ ಪನಾಮ, ಹೊಂಡುರಾಸ್ ಮತ್ತು ಚಿಲಿಗೆ ಭೇಟಿ ನೀಡಿದರು.

2. ರಾಜ್ಯ ಸಚಿವೆ ಎಮ್ಒಎಸ್ (ಎಮ್ಎಲ್) 28 ಏಪ್ರಿಲ್ - 01 ಮೇ 2022 ರಿಂದ ಪನಾಮಕ್ಕೆ ಅವರ ಭೇಟಿಯ ಸಮಯದಲ್ಲಿ, ಪನಾಮದ ವಿದೇಶಾಂಗ ವ್ಯವಹಾರಗಳ ಸಚಿವೆ ಗೌರವಾನ್ವಿತ ಶ್ರೀಮತಿ ಎರಿಕಾ ಮೊಯ್ನೆಸ್ ಅವರನ್ನು ಭೇಟಿ ಮಾಡಿದರು ಮತ್ತು ದ್ವಿಪಕ್ಷೀಯ ಚರ್ಚೆಗಳನ್ನು ನಡೆಸಿದರು, ಈ ಸಂದರ್ಭದಲ್ಲಿ ಪನಾಮ ಸರ್ಕಾರದ ಸಚಿವರಾದ ಗೌರವಾನ್ವಿತ ಘನತೆವೆತ್ತ ಶ್ರೀಮತಿ ಜನ್ಯೆನಾ ತೆವಾನಿ ಅವರು ಉಪಸ್ಥಿತರಿದ್ದರು. ವ್ಯಾಪಾರ ಮತ್ತು ಹೂಡಿಕೆ, ಆರೋಗ್ಯ ಮತ್ತು ಔಷಧ, ಆಯುಷ್, ಐಟಿ, ಬಾಹ್ಯಾಕಾಶ ಮತ್ತು ಸಂಸ್ಕೃತಿಯಲ್ಲಿ ಸಹಕಾರವನ್ನು ಹೆಚ್ಚಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ರಾಜತಾಂತ್ರಿಕ ಮಿಷನ್/ಪೋಸ್ಟ್‌ನ ಅಧಿಕಾರಿಗಳ ಅವಲಂಬಿತರಿಗೆ ಲಾಭದಾಯಕ ಉದ್ಯೋಗದ ಕುರಿತು ಭಾರತ ಮತ್ತು ಪನಾಮ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಭಾರತ- ಎಸ್ಐಸಿಎ ಚೌಕಟ್ಟು ಮತ್ತು ಬಹುಪಕ್ಷೀಯ ವೇದಿಕೆಗಳ ಮೂಲಕ ಹೆಚ್ಚಿನ ಸಹಕಾರವನ್ನು ಅನ್ವೇಷಿಸಲು ಎರಡೂ ಕಡೆಯವರು ಒಪ್ಪಿಕೊಂಡರು.

3. ಸಂಸ್ಕೃತಿ ಸಚಿವೆ ಗೌರವಾನ್ವಿತ ಶ್ರೀಮತಿ ಜಿಸೆಲ್ ಗೊನ್ಸಾಲೆಜ್ ವಿಲ್ಲಾರು ಅವರೊಂದಿಗಿನ ಸಭೆಯಲ್ಲಿ, ರಾಜ್ಯ ಸಚಿವೆ ಎಮ್ಒಎಸ್ (ಎಮ್ಎಲ್) 2021-24ರ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಒಪ್ಪಂದಕ್ಕೆ ಸಹಿ ಹಾಕಿದರು. ರಾಜ್ಯ ಸಚಿವೆ ಎಮ್ಒಎಸ್ (ಎಮ್ಎಲ್)ಯವರು ಪನಾಮ ಕೆನಾಲ್ ಆಡಳಿತದ ಸಚಿತರಾದ, ಶ್ರೀ ಅರಿಸ್ಟೈಡ್ಸ್ ರೋಯೊ ಅವರೊಂದಿಗೆ ಪನಾಮ ಕೆನಾಲ್‌ಗೂ ಸಹ ಭೇಟಿನೀಡಿದರು. ಸಚಿವರು ಅಮೆರಿಕಾದ ಅತಿದೊಡ್ಡ ಕೊಲೊನ್ ಫ್ರೀ ಟ್ರೇಡ್ ಝೋನ್ (ಎಫ್‌ಟಿಝಡ್) ಗೆ ಭೇಟಿ ನೀಡಿದರು ಮತ್ತು ಎಫ್‌ಟಿಝಡ್ ಕುರಿತು ಮತ್ತು ಭಾರತದೊಂದಿಗಿನ ಸಹಕಾರದ ಸಂಭಾವ್ಯ ಕ್ಷೇತ್ರಗಳ ಬಗ್ಗೆ ವಿವರಿಸಿದರು. ಅವರು ಪನಾಮ ಮೂಲದ ಭಾರತೀಯ ಉದ್ಯಮಿಗಳನ್ನು ಭೇಟಿಯಾದರು ಮತ್ತು ಎಫ್‌ಟಿಝಡ್ ನಲ್ಲಿರುವ ಅವರ ಶೋರೂಮ್‌ಗಳಿಗೆ ಭೇಟಿ ನೀಡಿದರು.

4. ಐಕಾನಿಕ್ ಸಿಂಟಾ ಕೋಸ್ಟೆರಾದಲ್ಲಿ 2022 ರ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ಪ್ರಾರಂಭದ ನೇತೃತ್ವವನ್ನು ರಾಜ್ಯ ಸಚಿವೆ ಎಮ್ಒಎಸ್ (ಎಮ್ಎಲ್) ವಹಿಸಿದ್ದರು. ಪನಾಮದ ಸಂಸ್ಕೃತಿ ಸಚಿವರು ಮತ್ತು ಇಬ್ಬರು ಉಪ ಸಚಿವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಜ್ಯ ಸಚಿವೆ ಹಿಂದೂ ದೇವಾಲಯಕ್ಕೆ ಭೇಟಿ ನೀಡಿದರು, ಸಾಂಪ್ರದಾಯಿಕ ಗರ್ಬಾದಲ್ಲಿ ಭಾಗವಹಿಸಿದರು ಮತ್ತು ಅಶೋಕ ಮರವನ್ನು ನೆಟ್ಟರು. ಅವರು ಎಕೆಎಎಮ್ ಆಚರಣೆಗಳ ಚೌಕಟ್ಟಿನಲ್ಲಿ ಆಯೋಜಿಸಲಾದ ಸಾಂಪ್ರದಾಯಿಕ ಪನಾಮನಿಯನ್ ಮತ್ತು ಭಾರತೀಯ ನೃತ್ಯಗಳನ್ನು ಪ್ರದರ್ಶಿಸುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಲ್ಯಾಟಿನ್ ಅಮೆರಿಕದ 15,000 ಸಂಖ್ಯೆಯ ಭಾರತೀಯ ಸಮುದಾಯದ ಸದಸ್ಯರೊಂದಿಗೆ ಅವರು ಸಂವಾದ ನಡೆಸಿದರು.

5. ರಾಜ್ಯ ಸಚಿವೆ 01-03 ಮೇ 2022 ರಿಂದ ಹೊಂಡುರಾಸ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ, ಹೊಂಡುರಾಸ್ ಅಧ್ಯಕ್ಷ ಗೌರವಾನ್ವಿತ ಘನತೆವೆತ್ತ ಶ್ರೀಮತಿ ಐರಿಸ್ ಕ್ಸಿಯೊಮಾರಾ ಕ್ಯಾಸ್ಟ್ರೋ ಸರ್ಮಿಯೆಂಟೊ ಅವರನ್ನು ಭೇಟಿ ಮಾಡಿದರು. ಅವರು ಹೊಂಡುರಾಸ್‌ನ ವಿದೇಶಾಂಗ ವ್ಯವಹಾರಗಳು ಮತ್ತು ಅಂತರರಾಷ್ಟ್ರೀಯ ಸಹಕಾರದ ಹಂಗಾಮಿ ಸಚಿವ ಗೌರವಾನ್ವಿತ ಶ್ರೀ ಆಂಟೋನಿಯೊ ಗಾರ್ಸಿಯಾ ಅವರನ್ನು ಭೇಟಿ ಮಾಡಿದರು ಮತ್ತು ವಿವಿಧ ದ್ವಿಪಕ್ಷೀಯ, ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ವಿಷಯಗಳ ಕುರಿತು ಚರ್ಚಿಸಿದರು. ರಾಜ್ಯ ಸಚಿವೆ ಕೃಷಿ ಸಚಿವೆ ಗೌರವಾನ್ವಿತ ಶ್ರೀಮತಿ ಲಾರಾ ಸುವಾಜೊ ಅವರೊಂದಿಗೆ ಭಾರತ ಸರ್ಕಾರವು ಲೈನ್ ಆಫ್ ಕ್ರೆಡಿಟ್ ಮೂಲಕ ಧನಸಹಾಯ ಮಾಡಿರುವ US $ 26.5 ಮಿಲಿಯನ್ ಜಮಾಸ್ತ್ರನ್ ವ್ಯಾಲಿ ನೀರಾವರಿ ಯೋಜನೆಗೆ ಅಡಿಪಾಯ ಹಾಕಿದರು. ಯೋಜನೆಯು 3,060 ಹೆಕ್ಟೇರ್ ಭೂಮಿಗೆ ನೀರಾವರಿ ಮತ್ತು ಸುಮಾರು 1200 ರೈತರಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಅಂದಾಜಿಸಲಾಗಿದೆ.

6. ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ, ರಾಜ್ಯ ಸಚಿವೆ ಹೊಂಡುರಾಸ್‌ನ ಅತಿದೊಡ್ಡ ಖಾಸಗಿ ವಿಶ್ವವಿದ್ಯಾಲಯದಲ್ಲಿ (ಯುನಿಟೆಕ್) 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಶಿಕ್ಷಣ ತಜ್ಞರನ್ನು ಉದ್ದೇಶಿಸಿ "75 ವರ್ಷಗಳ ಭಾರತದ ಬೆಳವಣಿಗೆಯ ಕಥೆ" ಕುರಿತು ಮಾತನಾಡಿದರು. ಭಾರತದ ಹೊಸ ಶಿಕ್ಷಣ ನೀತಿ 2020 ರ ಅಡಿಯಲ್ಲಿ ಸಹಕಾರದ ಸಾಧ್ಯತೆಗಳನ್ನು ಅನ್ವೇಷಿಸಲು ಅವರು ದೇಶದ 21 ವಿಶ್ವವಿದ್ಯಾಲಯಗಳ ರೆಕ್ಟರ್‌ಗಳು ಮತ್ತು ವೈಸ್ ರೆಕ್ಟರ್‌ಗಳೊಂದಿಗೆ ಸಂವಾದ ನಡೆಸಿದರು ರಾಜ್ಯ ಸಚಿವೆ ಎಮ್‌ಒಎಸ್ (ಎಮ್ಎಲ್) ಹೊಂಡುರಾಸ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದಲ್ಲಿ ಐಡಿವೈ 2022 ಗಾಗಿ ಕರ್ಟನ್ ರೈಸರ್ ಈವೆಂಟ್‌ನಲ್ಲಿ ಭಾಗವಹಿಸಿದರು, ಟ್ರೀ ಪ್ಲಾಂಟೇಶನ್ ಡ್ರೈವ್‌ನಲ್ಲಿ ಭಾಗವಹಿಸಿದರು ಮತ್ತು 2008 ರಲ್ಲಿ ಭಾರತದಿಂದ ಸ್ಥಾಪಿಸಲಾದ ಮಾಹಿತಿ ತಂತ್ರಜ್ಞಾನದಲ್ಲಿ (ಸಿಇಐಟಿ) ಶಿಕ್ಷಣದ ಶ್ರೇಷ್ಠತೆಯ ಕೇಂದ್ರಕ್ಕೆ ಭೇಟಿ ನೀಡಿದರು. ಇಲ್ಲಿಯವರೆಗೆ 26,000 ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ. ಭಾರತೀಯ ನೆರವಿನೊಂದಿಗೆ 2016 ರಲ್ಲಿ ಕೇಂದ್ರವನ್ನು ನವೀಕರಿಸಲಾಯಿತು. ರಾಜ್ಯ ಸಚಿವೆ ಎಮ್‌ಒಎಸ್ (ಎಮ್ಎಲ್) ಸಹ ಸ್ಯಾನ್ ಪೆಡ್ರೊ ಡಿ ಸುಲಾದಲ್ಲಿನ ಸಣ್ಣ ಆದರೆ ರೋಮಾಂಚಕ ಭಾರತೀಯ ಸಮುದಾಯದೊಂದಿಗೆ ಸಂವಹನ ನಡೆಸಿದರು.

7. ಚಿಲಿಯಲ್ಲಿ, ರಾಜ್ಯ ಸಚಿವೆ ಎಮ್‌ಒಎಸ್ (ಎಮ್ಎಲ್) ಚಿಲಿಯ ವಿದೇಶಾಂಗ ಸಚಿವೆ ಗೌರವಾನ್ವಿತ ಶ್ರೀಮತಿ ಆಂಟೋನಿಯಾ ಉರ್ರೆಜೋಲಾ ನೊಗುರಾ ಅವರನ್ನು ಭೇಟಿಯಾದರು, ಅವರೊಂದಿಗೆ ಅವರು ದ್ವಿಪಕ್ಷೀಯ ಸಂಬಂಧಗಳ ಬಗ್ಗೆ ವಿವರವಾದ ಚರ್ಚೆ ನಡೆಸಿದರು. ಔಷಧ, ಬಾಹ್ಯಾಕಾಶ, ನವೀಕರಿಸಬಹುದಾದ ಇಂಧನ ಮತ್ತು ವಿಕಲಾಂಗ ವ್ಯಕ್ತಿಗಳ ಸಬಲೀಕರಣಕ್ಕಾಗಿ ಸಹಕಾರಕ್ಕಾಗಿ ದ್ವಿಪಕ್ಷೀಯ ಒಪ್ಪಂದಗಳನ್ನು ಶೀಘ್ರವಾಗಿ ತೀರ್ಮಾನಿಸಲು ಅನುಕೂಲವಾಗುವಂತೆ ತಮ್ಮ ಆಂತರಿಕ ಪ್ರಕ್ರಿಯೆಗಳನ್ನು ತೀವ್ರಗೊಳಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ಅವರು ತಮ್ಮ ಹಂಚಿಕೆಯ ಮೌಲ್ಯಗಳು ಮತ್ತು ತತ್ವಗಳನ್ನು ನೀಡಿದ ಪೆಸಿಫಿಕ್ ಒಕ್ಕೂಟದಲ್ಲಿ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ಒಟ್ಟಿಗೆ ಕೆಲಸ ಮಾಡಲು ಒಪ್ಪಿಕೊಂಡರು.

8. ಚಿಲಿಯ ಸಂಸ್ಕೃತಿ, ಕಲೆ ಮತ್ತು ಪರಂಪರೆಯ ಸಚಿವೆ ಗೌರವಾನ್ವಿತ ಶ್ರೀಮತಿ ಜೂಲಿಯೆಟಾ ಬ್ರಾಡ್ಸ್ಕಿ ಹೆರ್ನಾಂಡೆಜ್ ಅವರೊಂದಿಗಿನ ಅವರ ಭೇಟಿಯ ಸಂದರ್ಭದಲ್ಲಿ, ಪರಸ್ಪರರ ದೇಶಗಳಲ್ಲಿ ಚಲನಚಿತ್ರಗಳ ಪ್ರದರ್ಶನ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಸಹಕರಿಸಲು ಎರಡೂ ಕಡೆಯವರು ಒಪ್ಪಿಕೊಂಡರು. ರಾಜ್ಯ ಸಚಿವೆ ಎಮ್‌ಒಎಸ್ (ಎಮ್ಎಲ್) ಚಿಲಿಯ ಚೇಂಬರ್ ಆಫ್ ಡೆಪ್ಯೂಟೀಸ್ ಸ್ಪೀಕರ್ ಗೌರವಾನ್ವಿತ ಶ್ರೀ ರೌಲ್ ಸೊಟೊ ಮತ್ತು ಭಾರತ-ಚಿಲಿ

ಸಂಸದೀಯ ಸ್ನೇಹ ಗುಂಪಿನ ಅಧ್ಯಕ್ಷ ಗೌರವಾನ್ವಿತ ಶ್ರೀ ಸಿಕಾರ್ಡಿನಿ ಅವರನ್ನು ಭೇಟಿಯಾದರು. ರಾಜ್ಯ ಸಚಿವರು ಚಿಲಿಯ ಸಂಸತ್ತಿನ ಅಧಿವೇಶನವನ್ನು ವೀಕ್ಷಿಸಿದರು.

9. ರಾಜ್ಯ ಸಚಿವೆ ಚಿಲಿಯ ಫೆಡರೇಶನ್ ಆಫ್ ಇಂಡಸ್ಟ್ರೀಸ್ (ಎಸ್‌ಓಎಫ್‌ಓಎಫ್‌ಎ) ಅನ್ನು ಭೇಟಿ ಮಾಡಿದರು ಮತ್ತು ವ್ಯಾಪಾರ ಮತ್ತು ಹೂಡಿಕೆಗಳಲ್ಲಿ ಬೆಳೆಯುತ್ತಿರುವ ದ್ವಿಪಕ್ಷೀಯ ಸಹಕಾರ, ಚಿಲಿಯ ಕಂಪನಿಗಳಿಗೆ ಅವಕಾಶಗಳು ಮತ್ತು ಭಾರತದೊಂದಿಗೆ ವ್ಯಾಪಾರ ಮಾಡುವ ಅನುಕೂಲಗಳ ಕುರಿತು ಚರ್ಚಿಸಿದರು. ಅವರು ಚಿಲಿಯಲ್ಲಿರುವ ಭಾರತೀಯ ಸಮುದಾಯದೊಂದಿಗೆ ಸಂವಾದ ನಡೆಸಿದರು ಮತ್ತು ಖಾದಿ ಮತ್ತು ಆಯುರ್ವೇದ ಪ್ರದರ್ಶನವನ್ನು ಉದ್ಘಾಟಿಸಿದರು ಮತ್ತು ಭಾರತ @75 ಎಕೆಎಎಮ್ ಆಚರಣೆಯ ಅಂಗವಾಗಿ ಮರವನ್ನು ನೆಟ್ಟರು. ಅವರು ಚಿಲಿಯಲ್ಲಿ ಐಡಿವೈ 2022 ಗಾಗಿ ಕರ್ಟನ್ ರೈಸರ್ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

10. ಪನಾಮ, ಹೊಂಡುರಾಸ್ ಮತ್ತು ಚಿಲಿ ಭೇಟಿಯು ಮಧ್ಯ ಮತ್ತು ದಕ್ಷಿಣ ಅಮೆರಿಕಾದ ಈ ದೇಶಗಳೊಂದಿಗೆ ಭಾರತದ ಸಂಬಂಧಗಳಿಗೆ ಹೊಸ ಚೈತನ್ಯವನ್ನು ನೀಡಿತು.

**ನವ ದೆಹಲಿ**
**ಮೇ 08, 2022**

DISCLAIMER: This is an approximate translation. The original is available in English on MEA's website and may be referred to as the official press release.